ನೂಪುರ ಭ್ರಮರಿ–ನೃತ್ಯಸಂಶೋಧನ ನಿಯತಕಾಲಿಕೆ ( 2321– 2519 ISSN NO)

ಸಂಪುಟ 15 ; ಸಂಚಿಕೆ 3; ಆಗಸ್ಟ್ –ಡಿಸೆಂಬರ್ 2021 ; ಶೋಧಸರಣಿಯ ವಿಶೇಷ ಪ್ರಸ್ತುತಿ

# ಸಾಳ್ವ ಕವಿಯ ರಸರತ್ನಾಕರದ ಪರಿವೇಶದಲ್ಲಿ ರಸಾಧ್ಯಯನ

– ಗಣರಾಜ ಕುಂಬ್ಳೆ

ನಿವೃತ್ತ ಉಪನ್ಯಾಸಕರು, ರಾಮಕುಂಜ

**ರಸವೆಂದರೇನು ?**

ರಸ್ಯತೇ ಇತಿ ರಸಃ । ಆಸ್ವಾದ್ಯವಾದ್ದರಿಂದ ರಸ

ವ್ಯಂಜನಗಳೊಂದಿಗೆ ಅನ್ನವನ್ನು ಕಲಸಿ ಉಂಡು ಹರ್ಷಿಸುವಂತೆ ಇದು ವೇದ್ಯ.

ಸ್ಥಾಯೀಭಾವಗಳೇ ಮೂಲವಾಗಿದ್ದು ವಿವಿಧ ರಸೋತ್ಪತ್ತಿ.

+

ವಿಭಾವಾನುಭಾವಸಂಚಾರಿ ಸಂಯೋಗಾತ್ ರಸ ನಿಷ್ಪತ್ತಿಃ ।

ಸ್ಥಾಯಿಭಾವ ಯಾರದು ?

ಸ್ಥಾಯಿಭಾವ ಎಲ್ಲಿರುತ್ತದೆ ?

ಸ್ಥಾಯಿಭಾವಕ್ಕೂ ರಸಕ್ಕೂ ಸಂಬಂಧವೇನು ?

ಸ್ಥಾಯಿಭಾವಕ್ಕೂ ರಸಕ್ಕೂ ವ್ಯತ್ಯಾಸವೇನು ?

ರಸ ಹೊಸತಾಗಿ ಹುಟ್ಟುವುದೋ ? ಮೊದಲಿದ್ದದ್ದೇ ಕಾಣಿಸಿಕೊಳ್ಳುವುದೋ ?

ಇಲ್ಲಿ ಸಂಯೋಗ, ನಿಷ್ಪತ್ತಿ ಎಂಬೀ ಪದಗಳಲ್ಲಿ ಹೇಗೆ ಸಂಯೋಗ ? ಎಲ್ಲಿ ನಿಷ್ಪತ್ತಿ ? ಎಂಬ ಪ್ರಶ್ನೆಗಳು ಹುಟ್ಟುತ್ತವೆ.

**ಭಟ್ಟಲೊಲ್ಲಟ**ನೆಂಬ ಆಲಂಕಾರಿಕನು ಅನುಕಾರ್ಯನಲ್ಲೇ ರಸೋತ್ಪತ್ತಿ ಎಂತಲೂ "ಸ್ಥಾಯಿಭಾವವೇ ರಸ" [ಚಿರಂತನಾನಾಮ್ ಚ ಅಯಮೇವ ಪಕ್ಷಃ] ಹಿರಿಯರ ಅಭಿಪ್ರಾಯ ಇದೇ ಎಂದಿದ್ದಾನೆ.

ಶ್ರೀ ಶಂಕುಕ, ಭಟ್ಟನಾಯಕ ಮೊದಲಾದವರೂ ಈ ಮೇಲಿನ ಪ್ರಶ್ನೆಗಳಿಗೆ (ಅಭಿನವಗುಪ್ತನಿಗಿಂತ ಮೊದಲು) ಉತ್ತರಿಸಲು ಯತ್ನಿಸಿದ್ದಾರೆ.

ನಾಟ್ಯ ⟷ ಪ್ರೇಕ್ಷಕ, ಸಾಮಾಜಿಕ

ಕಾವ್ಯ ⟷ ಸಹೃದಯ

ಅನುಕಾರ್ಯ (ಅಭಿನಯ) → ಅನುಕರ್ತ → ಸಾಮಾಜಿಕ (ರಸಾನುಭವಿ) – ಇದು ರಸಾನುಭವದ ಪಥ.

"ಅನುಕಾರ್ಯನಲ್ಲೇ ಸ್ಥಾಯೀಭಾವದ ಪುಷ್ಟಿ"

ವಿಭಾವ, ಅನುಭಾವ, ಸಂಚಾರೀಭಾವಗಳು ಸ್ಥಾಯಿಭಾವದೊಂದಿಗೆ ಸಂಯೋಗಗೊಂಡು ರಸದ ನಿಷ್ಪತ್ತಿ.

ಉದಾಹರಣೆಗೆ ಶೃಂಗಾರ ರಸ –

ಕಥಾನಾಯಿಕೆಯೇ ಆಲಂಬನ ವಿಭಾವ

ಉದ್ಯಾನ, ಬೆಳದಿಂಗಳು, ಉದ್ದೀಪನ ವಿಭಾವ, ಕಡೆಗಣ್ಣನೋಟ, ಮಂದಗಮನ ಅನುಭಾವ, ಔತ್ಸುಕ್ಯ, ನಿರ್ವೇದ ಹರ್ಷ ಸಂಚಾರೀಭಾವಗಳು. ಇವುಗಳಿಂದ ಸ್ಥಾಯೀಭಾವ ಪರಿಪುಷ್ಟವಾಗುತ್ತದೆ.

ಅನುಕಾರ್ಯರಲ್ಲಿ ಸ್ಥಾಯಿಭಾವ ಶಿಖರಕ್ಕೇರಿ ರಸವಾಗುತ್ತದೆ. ಸಾಮಾಜಿಕರು ಅರಿತು ಆನಂದಿಸುತ್ತಾರೆ.

"**ನಿಷ್ಪತ್ತಿ**" ಎಂದರೆ, ಜ್ಞಪ್ತಿ, ಉತ್ಪತ್ತಿ, ಪುಷ್ಟಿ ಎಂದೆಲ್ಲ ಅರ್ಥಗಳಿವೆ.

**ಉಪಚಯ** (ರಸದ ಉಪಚಿತಿ) ಪೋಷಣೆ

**ಶ್ರೀಶಂಕುಕ :–** ರಂಗವ್ಯಾಪಾರವನ್ನು "ಚಿತ್ರ ತುರಗ ನ್ಯಾಯ"ದಂತೆ ಪರಿಭಾವಿಸಬೇಕು ಎಂಬುದು ಇವನ ಅಭಿಮತ. ಇದು ಸಮ್ಯಕ್, ಮಿಥ್ಯಾ, ಸಂಶಯ, ಸಾದೃಶ್ಯ ಜ್ಞಾನವಲ್ಲವೆಂದೂ ಶಂಕುಕ ತಿಳಿಸಿದ್ದಾನೆ.

ಅನುಕರ್ತನ ಅಭಿನಯವನ್ನು ನಿಜವೆಂದೇ ಸಾಮಾಜಿಕ ತಿಳಿಯುತ್ತಾನೆ. ಚಿತ್ರದ ಕುದುರೆಯನ್ನು ನಿಜವೆಂದು ತಿಳಿದು ವ್ಯವಹರಿಸಿದಂತೆ. ಇದನ್ನೆ ಅನುಮಾನ ಹೊಂದು, ಅನುಮಿತಿಯಾಗು ಎನ್ನುತ್ತಾನೆ. ನಟನಿಂದ ಅನುಕೃತವಾಗಿ ಸಾಮಾಜಿಕನಿಂದಲೂ ಅನುಮಿತವಾಗುವ ಸ್ಥಾಯೀ ಭಾವವೇ ರಸ.
ಇಲ್ಲಿ ಸಾಮಾಜಿಕನ ಸ್ಥಾಯೀ ಭಾವದ ಪ್ರಸ್ತಾಪವಿಲ್ಲ. ಆತ ತಟಸ್ಥ.

**ಭಟ್ಟನಾಯಕ:–** ಈತನು ವ್ಯಂಜನಾವ್ಯಾಪಾರವನ್ನು ಭಾವಕತ್ವ ಹಾಗೂ ಭೋಜಕತ್ವ ಎಂದು 2 ಬಗೆ ಎನ್ನುತ್ತಾನೆ.

ಭಾವಕತ್ವ – "ಸಾಧಾರಣೀಕರಣ" ಇದರಿಂದ ರಸ.

ಭೋಜಕತ್ವ – ಇದು ಸಾಮಾಜಿಕನಿಗೆ ಭೋಗ ವಿಷಯ. ರಸಾನುಭವ ಬ್ರಹ್ಮಾನಂದಸೋದರ. "ಸತ್ತ್ವೋದ್ರೇಕ"ದ ಮೂಲಕ "ಆನಂದಮಯ ವಿಶ್ರಾಂತಿ"

ಕಾವ್ಯದಲ್ಲಿ ಶಬ್ದ ವ್ಯಾಪಾರದಿಂದ ರಸವು ಭಾವ್ಯ, ಸಾಮಾಜಿಕನು ಅದನ್ನು ತಾನೇ ಭೋಗಿಸುವನು.

**ಅಭಿನವಗುಪ್ತ :–** ಇವನ ಮಂಡನೆ ಐತಿಹಾಸಿಕ ವಿಧಾನದಲ್ಲಿದೆ. ಸೋಪಾನ ಪದ್ಧತಿ ಎನ್ನಬಹುದು.

"ಹಳಬರ ಸಾಧನೆ ಹೊಸಬರಿಗೆ ಸಿದ್ಧಿಯ ಸೋಪಾನ"

"ಮೊದಮೊದಲು ಗೋಡೆಯಿಲ್ಲದೆ ಚಿತ್ರ ಬರೆದಂತೆ"

"ತುದಿತುದಿಗೆ ಸೇತುಬಂಧ ನಗರ ನಿರ್ಮಾಣಗೈದಂತೆ"

"ಹಿರಿಯರು ಈಗಾಗಲೇ ಹೇಳಿದ್ದನ್ನೆ ಮತ್ತೆ ಜೋಡಿಸಿ ಹೇಳುವುದು ಹೊಸತಾಗಿ ಹೇಳಿದಂತೆ ಫಲದಾಯಕವಾದುದು" [ಅಭಿನವಗುಪ್ತ]

ನಾಟ್ಯ, ಕಾವ್ಯಗಳಲ್ಲಿ ಲೋಕೋತ್ತರ ವಿಷಯಗಳು, ಪಾತ್ರಗಳು ಇವೆ. ಸಾಮಾಜಿಕರಲ್ಲಿ "ಸಾಧಾರಣೀಕರಣ" ಇದೆ. ಆದರೆ ಅವರಲ್ಲಿ "ತಟಸ್ಥ ತಲ್ಲೀನತೆ" ಇದೆ ಎಂದು ಪ್ರಸ್ತಾಪಿಸುತ್ತಾನೆ.

ಸ ವಾಸನಾನಾಂ ಸಭ್ಯಾನಾಂ ರಸಸ್ಯಾಸ್ವಾದನಂ ಭವೇತ್ ।
ನಿರ್ವಾಸನಾಸ್ತು ರಂಗಾಂತಃ ಕಾಷ್ಠ ಕುಡ್ಯಾಶ್ಮ ಸಂನಿಭಾಃ ॥

[ಪ್ರಭಾಕರನ–'ರಸಪ್ರದೀಪ'ದಲ್ಲಿ (ತದುಕ್ತಂ ಧರ್ಮದತ್ತೇನ) ಧರ್ಮದತ್ತ ಹೇಳಿದ್ದನ್ನು ಇಲ್ಲಿ ಅಭಿನವಗುಪ್ತನು ಹೇಳಿದ್ದಾನೆ.]

ಈ ಸಾಧಾರಣೀಕರಣದಿಂದ ಆಸ್ವಾದ್ಯವಾದುದೇ ರಸ.

ಸಾಮಾಜಿಕನ ಮನಸ್ಸು ರಸಾಸ್ವಾದನೆಯ ವೇಳೆ ಏಕಾಗ್ರವಾಗಿ ನೆಲೆಗೊಂಡಿರುತ್ತದೆ.

ರಸಕ್ಕೂ ವಿಭಾವಾನುಭಾವಾದಿಗಳಿಗೂ ಏನು ಸಂಬಂಧ ? ಎಂದು ಅಭಿನವಗುಪ್ತ ವಿವೇಚಿಸಿದ್ದಾನೆ.

ಇದು ಕಾರ್ಯಕಾರಣ ಸಂಬಂಧವಲ್ಲ. ಹಾಗಿದ್ದರೆ ಕುಂಬಾರ ಅಳಿದರೂ ಮಡಕೆ ಉಳಿಯುವಂತೆ ಕಾವ್ಯವನ್ನು ಕೇಳಗಿಟ್ಟಾಗಲೋ ರಂಗಮಂದಿರದಿಂದ ಹೊರಬಂದಾಗಲೋ ರಸಧಾರೆ ಉಳಿಯಬೇಕಿತ್ತು.

ಹಾಗಾದರೆ ಇವುಗಳ ಸಂಬಂಧ ಅನ್ನವನ್ನು ಬೇಯಿಸುವ ಪ್ರಕ್ರಿಯೆ – ಅಕ್ಕಿ, ನೀರು, ಬೆಂಕಿ ಇತ್ಯಾದಿ ಸೇರಿ.

ಇದು ಕಾರ್ಯಕಾರಣ, ಜ್ಞಾಪ್ಯಜ್ಞಾಪಕ ಸಂಬಂಧಕ್ಕಿಂತ ವಿಲಕ್ಷಣ. ಇದು "ಅಲೌಕಿಕ" ಅನುಭವ.

ವಿಭಾವಾದಿಗಳು ಗೋಚರವಾದಾಗಲೇ ರಸಗೋಚರ. ಅವು ಲಯಿಸಿದ ಕೂಡಲೇ ರಸವು ಲಯಿಸುವುದು. ಪಾನಕದಲ್ಲಿ ಹುಳಿ, ಸಿಹಿ, ಏಲಕ್ಕಿ ಇತ್ಯಾದಿಗಳು ಬೆರೆತಿದ್ದ ಹಾಗೆ. ಅಖಂಡದಲ್ಲಿ ಆಸ್ವಾದ್ಯ. ಪ್ರತ್ಯೇಕದಲ್ಲಿ ರಸವಿಲ್ಲ.

Copyright Protected

**ರಸನಿಷ್ಪತ್ತಿಗೆ ಇರುವ ಅಡ್ಡಿಗಳು ವಿಘ್ನ ಸಪ್ತಕ:–**

**೧. ಸಂಭಾವನಾ ವಿರಹ, ೨. ದೇಶಕಾಲ ವಿಶೇಷಾವೇಶ, ೩. ನಿಜಸುಖಾದಿ ವಿವಶೀಭಾವ,**

**೪. ಪ್ರತೀತ್ಯುಪಾಯ ವೈಕಲ್ಯ, ೫. ಸ್ಫುಟತ್ವಾಭಾವ, ೬. ಅಪ್ರಧಾನತಾ, ೭. ಸಂಶಯಯೋಗ.**

"ಸರ್ವಥಾ ರಸನಾತ್ಮಕ ವೀತವಿಘ್ನ ಪ್ರತೀತಿ ಗ್ರಾಹ್ಯೋಭಾವ ಏವ ರಸಃ ।" (ಎಂತೂ ವಿಘ್ನಗಳು ತೊಲಗಿ ಅರಿವಾಗುವ ಆಸ್ವಾದಮಯ ಭಾವವೇ ರಸ)

ತತ್ರ ವಿಘ್ನಾಪಸಾರಕಾ ವಿಭಾವಾದಿ ಪ್ರಭೃತಯಃ ।

(ಅಲ್ಲಿ ವಿಘ್ನಗಳನ್ನು ವಿವಾರಿಸತಕ್ಕವು ವಿಭಾವಾದಿಗಳು)
"ಹ್ಲಾದಃ ಸ್ವವಿಶ್ರಾಂತಿ ಲಕ್ಷಣಂ" (ಮಮ್ಮಟ ಕಾವ್ಯಪ್ರಕಾಶ)

**ಆನಂದವರ್ಧನ:–**

ರಸಾನುಭವ ಸಾಮಾಜಿಕನಿಗೆ ಎನ್ನುವುದು ಆನಂದವರ್ಧನನ ಅಭಿಮತ.

ಸಾಮಾಜಿಕನ ರಸಾನುಭವಕ್ಕೆ ಕವಿಯ ರಸಾನುಭವವೇ ಮೂಲ

ಕವಿಗತರಸವೇ ಮೂಲಬೀಜ. ಕವಿ ಸಾಮಾಜಿಕನಿಗೆ ಸಮ.

ಶೃಂಗಾರೀ ಚೇತ್ ಕವಿಃ ಕಾವ್ಯೇ ಜಾತಂ ರಸಮಯಂ ಜಗತ್ ।

ಸ ಏವ ವೀತರಾಗಶ್ಚೇತ್ ನೀರಸಂ ಸರ್ವಮೇವ ತತ್ ॥ (ಧ್ವನ್ಯಾಲೋಕ – ಆನಂದವರ್ಧನ)

(ಕವಿ ರಸಿಕನಾದರೆ ಕಾವ್ಯಜಗತ್ತು ರಸಮಯ. ಅವನು ವಿರಕ್ತನಾದರೆ ಅದೆಲ್ಲ ನೀರಸ)

ಕವಿ ಲೋಕವ್ಯಾಪಾರ ನೋಡಿ ಪರವಶ. ಅದನ್ನು ಕಾವ್ಯವಾಗಿಸಿದಾಗ ಓದಿದ ರಸಿಕ ಪರವಶ.

**ರಸಪ್ರಭೇದಗಳು:–**

ಶೃಂಗಾರ ಹಾಸ್ಯ ಕರುಣಾ ರೌದ್ರವೀರ ಭಯಾನಕಾಃ ।

ಭೀಭತ್ಸಾದ್ಭುತ ಸಂಜ್ಞಾ ಚೇತ್ಯಷ್ಟೌ ನಾಟ್ಯೇ ರಸಾಃ ಸ್ಮೃತಾಃ ॥ [ನಾಟ್ಯಶಾಸ್ತ್ರ–ಭರತ ಮುನಿ]

ರತಿರ್ಹಾಸಶ್ಚ ಶೋಕಶ್ಚ ಕ್ರೋಧೋತ್ಸಾಹೌ ಭಯಂ ತಥಾ ।

ಜುಗುಪ್ಸಾ ವಿಸ್ಮಯಶ್ಚೇತಿ ಸ್ಥಾಯೀ ಭಾವಾಃ ಪ್ರಕೀರ್ತಿತಾಃ ॥ [ನಾಟ್ಯಶಾಸ್ತ್ರ–ಭರತ ಮುನಿ]

ಎಂಟು ರಸಗಳಲ್ಲಿ ಪ್ರಾತಿನಿಧಿಕವಾಗಿ ಪ್ರತ್ಯೇಕ ಬಣ್ಣ, ದೇವತೆ, ವಿಭಾವ, ಅನುಭಾವ ಸಂಚಾರೀ ಭಾವಗಳು ಅಭಿನಯಕ್ರಮಗಳು... ಭರತ ಮುನಿಯ ವಿವರಣೆ ಅಧ್ಯಯನ ಕುತೂಹಲವನ್ನು ಅರಳಿಸುತ್ತದೆ

ಈಚಿನ ಆಲಂಕಾರಿಕರು ಶೃಂಗಾರ ಪ್ರಕಾರಗಳು, ನಾಯಕ ನಾಯಿಕೆಯರ ಪ್ರಭೇದಗಳು, ಹಾವಭಾವಗಳು ಮುಂತಾದುವನ್ನು ವಿಸ್ತಾರವಾಗಿ ತಿಳಿಸುತ್ತಾರೆ.

ಉದಾಃ– ಶೃಂಗಾರ ರತ್ನಾಕರ, ರಸರತ್ನಾಕರ.

**ಶೃಂಗಾರ** – ಸಂಭೋಗ ಶೃಂಗಾರ – ಪ್ರಿಯರ ಸೇರಿಕೆ

Copyright Protected

ವಿಪ್ರಲಂಭ ಶೃಂಗಾರ – ಪ್ರಿಯರ ಅಗಲಿಕೆ

ಸಂ. ಶೃಂ. – ದರ್ಶನ, ಸಲ್ಲಾಪ, ಸಮಾಗಮ / ಹರ್ಷ ನಾಚಿಕೆ ಇತ್ಯಾದಿ ಸಂಚಾರಿ

ವಿ. ಶೃಂ. – **ಲಕ್ಷ್ಯ:** ಬಾಲೆ !

ಏನದುನಾಥ ?

ಮುನಿಸ ತೊರೆ ಮಾನಿನಿ !

ಎದೆಬೇಗೆ ನಮ್ಮಲ್ಲಿ !

ನಿಮ್ಮ ತಪ್ಪೇನಿಲ್ಲಿ ? ತಪ್ಪೆಲ್ಲವೂ ನನ್ನದು

ಅಂತಿರಲು ನುಡಿವಾಗ ಬಿಕ್ಕಳಿಸುತೇಕಳುವೆ ?

ಆರ ಮುಂದಳುತಿರುವುದು ?

ನನ್ನ ಮುಂದಿದೋ !

ನಿನಗೆ ನಾನಾರು ?

ನಲ್ಲೆ !
ನಾನಲ್ಲವೆಂದಳುತಿರುವುದು (ಅಮರುಶತಕದ ಅನುವಾದ)

**ಹಾಸ್ಯ –** ಆತ್ಮಸ್ಥ, ಪರಸ್ಥ ಎಂದು ೨ ಬಗೆ.

ಭರತನ ಪ್ರಕಾರ ವಿಕಾರ ವೇಷ, ವಿಷಯ ಚಾಪಲ್ಯ, ಕುಚೇಷ್ಟೆ, ಅಂಗವೈಕಲ್ಯ, ದೋಷಾರೋಪಣೆ, ಇತ್ಯಾದಿ ವಿಭಾವಗಳು.

೩ ಬಗೆಯ ಹಾಸ್ಯಗಳು

ಉತ್ತಮ ಪ್ರಕೃತಿಯವರಿಗೆ – ಸ್ಮಿತ, ಹಸಿತ

ಮಧ್ಯಮ – ವಿಹಸಿತ, ಉಪಹಸಿತ

ಅಧಮ – ಅಪಹಸಿತ, ಅತಿಹಸಿತ

ಅಭಿನವಗುಪ್ತ – ಅನೌಚಿತ್ಯ ಪ್ರವೃತ್ತಿಯಿಂದ ಹಾಸ್ಯ ಎನ್ನುತ್ತಾನೆ.

**ಕರುಣ –** ಶೋಕವೇ ಸ್ಥಾಯಿ. ವಿಪ್ರಲಂಭದ ಮುಂದಿನ ಹಂತ. ಅಗಲಿಕೆ ಶಾಶ್ವತವಾದಾಗ ಶೋಕ, ಅದರಿಂದ ಕರುಣ ರಸ.

**ರೌದ್ರ –** ಕ್ರೋಧ, ತಾಮಸ ಪ್ರಕೃತಿಯ ಅನುಕರಣೆಯಿಂದ ಈ ರಸದ ಪ್ರತೀತಿ.

**ವೀರ –** ಉತ್ಸಾಹವೇ ಸ್ಥಾಯೀಭಾವ. ದಾನವೀರ, ಧರ್ಮವೀರ, ಯುದ್ಧವೀರ ಎಂದು ೩ ಬಗೆ (ಭರತ ಮುನಿ)

ಕರ್ಣ, ಧರ್ಮರಾಯ, ಅರ್ಜುನ ಈ ಪಾತ್ರಗಳು ಅನುಕ್ರಮವಾಗಿ ಮಾದರಿಗಳು.

**ಭಯಾನಕಃ –** ಭಯವೇ ಸ್ಥಾಯೀಭಾವ.

**ಬೀಭತ್ಸ** – ಜುಗುಪ್ಸೆಯೇ ಸ್ಥಾಯೀಭಾವ.

**ಅದ್ಭುತ** – ವಿಸ್ಮಯವೇ ಸ್ಥಾಯೀಭಾವ. ('ಚಮತ್ಕಾರ' ರಸೇ ಸಾರಃ ಚಮತ್ಕಾರಃ – ಸಾಹಿತ್ಯದರ್ಪಣ)

ಭರತನು ಎಂಟು ರಸಗಳನ್ನು ಮಾತ್ರ ಹೇಳಿದ್ದಾನೆ.

**ಶಾಂತ** – (ಲೊಲ್ಲಟನು ಸೇರಿಸಿದ್ದಿರಬಹುದು) **'ಶಮ'**ಯೇ ಸ್ಥಾಯಿ – 'ತೃಷ್ಣಾಕ್ಷಯ'

ಕನ್ನಡದ ಆಲಂಕಾರಿಕರು ಜೈನರು. ಅವರು ಶಾಂತರಸವನ್ನು ಒಪ್ಪಿ ಮುಂದುವರಿದಿದ್ದಾರೆ.

ಸ್ನೇಹ<br>ವಾತ್ಸಲ್ಯ<br>ಭಕ್ತಿ } ಸಕಾಮ ಸ್ನೇಹ **'ರತಿ'**, ಅಕಾಮ ಪ್ರೀತಿ ಸ್ನೇಹ ರಸಗಳು ಶೃಂಗಾರ ರಸಕ್ಕೆ ಅಧೀನವೆಂದು ಲಾಕ್ಷಣಿಕರ ಮತವಿದೆ.

## ಕನ್ನಡದಲ್ಲಿ ಕಾವ್ಯಲಕ್ಷಣ ಗ್ರಂಥಗಳು

**ಕವಿರಾಜಮಾರ್ಗ** – (ಒಂಬತ್ತನೆಯ ಶತಮಾನ) ಶ್ರೀವಿಜಯ ಕರ್ತೃ

ದಂಡಿಯ **ಕಾವ್ಯಾದರ್ಶ** ಈತನ ಕೃತಿಗೆ ಮಾದರಿ ವ್ಯತ್ಯಾಸಗಳೆಂದರೆ – ರಸಗಳು ಎಂಟು ಎಂದು ದಂಡಿ, ಒಂಬತ್ತು ಎಂದು ಕವಿರಾಜಮಾರ್ಗಕಾರ. ಈ ಗ್ರಂಥದಲ್ಲಿ **ಧ್ವನಿ**ಯ ಪ್ರಸ್ತಾವವಿದೆ.

ವೀರಾದ್ಭುತ ಕರುಣಾ ಶೃಂ<br>
ಗಾರ ಭಯಾನಕ ಸ ರೌದ್ರ ಬೀಭತ್ಸ ಮಹಾ।<br>
ಸಾರತರ ಹಾಸ್ಯ ಶಾಂತಾ<br>
ಧಾರಂ ನವವಿಧ ಕಲ್ಪಮಾ ರಸಮಾರ್ಗಂ ॥

ಶ್ರೀವಿಜಯನು–

ನವವಿಧರಸಂಗಳಂ ಮನ

ಕೆವರೆ ನಿರೂಪಿಸುವ ವಚನ ವಿರಚನೆ ರಸವದ್

Copyright Protected

ವಿವಿಧಾಳಂಕಾರಂ ಕುರಿ

ತುವಿಕಲ್ಪಿಸಿ ತೋರ್ಪೆನದರ ಲಕ್ಷ್ಯ ಕ್ರಮಮಂ

'ನವರಸಗಳು ಮನಮುಟ್ಟುವಂತೆ ಕಾವ್ಯದ ವಚನ ವಿರಚನೆಗಳಿರಬೇಕು' ಎನ್ನುತ್ತಾ 'ರಸಗಳ ಲಕ್ಷ್ಯ ಕ್ರಮವನ್ನು ತೋರುತ್ತೇನೆ' ಎಂದಿದ್ದಾನೆ.

ರಸಗಳು ಒಂಬತ್ತು ಎಂದು ಸೂಚಿಸುತ್ತಾ **'ರಸಮಾರ್ಗಂ'** ಎನ್ನುತ್ತಾನೆ. (ಪರಂಪರಾಗತ ಎಂದರ್ಥ)

**ಲಕ್ಷ್ಯಗಳು:–**

**ವೀರ ರಸಕ್ಕೆ:–**

ರಾವಣನಂ ಕೊಂದು ಜಯ

ಶ್ರೀವಧುವಂ ತಾಳ್ದಿ ಮುಯ್ವಿನೊಳ್ ವರ ಸೀತಾ

ದೇವತೆಯಂ ತರ್ಪನ್ನೆಗ

ಮೋವದೆ ಪುರುಷವ್ರತೋಚಿತ **ವೀರ**ರಸಂ

**ಅದ್ಭುತ ರಸಕ್ಕೆ:–**

ಜಲನಿಧಿಯಂ ಪಾಯ್ದೊರ್ವನೆ

ನಿಲಿಕಿ ದಶಾನನನ ಪೊಳಲನಾ ಲಂಕೆಯನಾ

ಕುಲಮಿಲ್ಲದಿರಿದು ನಿಂದಂ

ಕಲಿಯಾದಂ ಬಗೆದು ನೋಳ್ಪೊಡ**ದ್ಭುತ**ಮಾದಂ

**ಕರುಣಾರಸಕ್ಕೆ :–**

ಕರೆಕರೆದು ಮನೋಧೃತಿಯಂ

ನೆರೆವಾಸೆಯೊಳಿರ್ದ‍ಳಲ್ಲದುಳಿದೊಡೆ ನಿನ್ನಾ

ವಿರಹಾನಳನಾ ತಾಪದೆ

ಕರಗುಗುಮಿನ್ನಾಕೆಗಿನಿಸು **ಕರುಣೆ**ಸು ಮನದೊಳ್

**ಶೃಂಗಾರ ರಸಕ್ಕೆ :–**

ಪುಳಕಿತ ಕಪೋಳಫಳಕಂ

ವಿಳಸಿತ ಮದಿರಾರುಣೇಕ್ಷಣಂ ಸ್ಫುರಿತೋಷ್ಠಂ

ಕೆಳದೀ ನಿನ್ನ ಮುಖಂ ತಳ

ಮಳಗೊಳಿಸುಗುಮಿಂತು ನಿಭೃತ **ಶೃಂಗಾರ** ರಸಂ

**ಭಯಾನಕ :–**

ತಾಳತರುವಿತತಿಯೊಳ್ ಬೇ

Copyright Protected

ತಾಳಂಗಳ್ ಮೊರೆದು ತೆರೆದು ಬಾಯ್ಗಳನಾ ಪಾ
ತಾಳ ಬಿಲಂಗಳವೋಲ್ ತಳ
ತಾಳಲಯಕ್ರಮದೆ ಕುಣಿಯೆ **ಭಯ**ಮಯನಾದಂ

**ರೌದ್ರ ರಸಕ್ಕೆ :–**

ಕೊಂದು ಜಟಾಯುವನಾತಂ
ಮುಂದಿಟ್ಟಾಜನಕಸುತೆಯನೊಯ್ದಂ ಮತ್ತಾ
ಪಂದೆಯನಂತಕ ಮುಖದೊಳ್
ತಂದಿಟ್ಟಂದಲ್ಲದುಳಿಗುಮೇ **ರೌದ್ರ**ರಸಂ

**ಬೀಭತ್ಸ ರಸಕ್ಕೆ :–**

ನವವಿವರಾವೃತ ಪೂತಿ
ದ್ರವತ್ವಗಾವೃತವಿವಿಶ್ರಮಾಂಸೋಪಚಿತಮ
ಧ್ರುವಮಸುಚಿತ್ರಭ್ರಮಿತಾ
ಸ್ಥಿವಹಂ ಮೆಯ್ ಬಗೆವೊಡಿಂತು **ಕಿಸುಗು**ಳಮಾದಂ

**ಹಾಸ್ಯ ರಸಕ್ಕೆ :–**

ಪರಪುರುಷ ಸೇವನಾಕೃತ
ಸುರತವಿಕಾರಂಗಳೆಲ್ಲಮಂ ನಿಜಪತಿಯೊಳ್
ನೆರೆದಾಗಳೆ ಮರೆಯಲ್ಬಗೆ
ದಿರವದು **ನಗಿ**ಸಿತ್ತು ಪೀನಮಭಿಸಾರಿಕೆಯಾ

**ಶಾಂತ ರಸಕ್ಕೆ :–**

ಮಿಗೆ ರಣದೊಳ್ ಪರಿಚಿತಮಾ
ದ್ವಿಗುಣಮದೋರಂತೆ ಮಟ್ಟಮಿರ್ದುದು ಮತ್ತಂ
ವಿಗತವಿಕಾರಾಕಾರಂ
ಸೊಗಯಿಸುಗುಂ ನಿನ್ನ ರೂಪು **ಶಾಂತಾ**ಧಾರಂ

ಶ್ರೀವಿಜಯನು ತನ್ನ ಸ್ತುತಿಯಲ್ಲಿ ಇಷ್ಟು ಸಂಕ್ಷೇಪವಾಗಿ ಲಕ್ಷಣ ಹಾಗೂ ಲಕ್ಷ್ಯಗಳನ್ನು ಹೇಳಿ ಮುಗಿಸಿದ್ದಾನೆ. ಎರಡನೆಯ ನಾಗವರ್ಮನು ತನ್ನ ಕಾವ್ಯಾವಲೋಕನದ ಐದನೆಯ ಅಧಿಕರಣದಲ್ಲಿ ರಸಗಳನ್ನು ಕುರಿತು ಸ್ವಲ್ಪ ವಿವರಗಳನ್ನು ನೀಡಿದ್ದಾನೆ. ಇವರುಗಳ ಅನಂತರದಲ್ಲಿ ರಸಗಳನ್ನು ಕುರಿತ ಅಧ್ಯಯನ ಗ್ರಂಥ ಬಂದುದು ಸಾಳ್ವನಿಂದ.

## 'ಸಾಳ್ವ ಕವಿ ವಿರಚಿತ ರಸರತ್ನಾಕರ'

Copyright Protected

ಮೈಸೂರು ವಿ.ವಿ. ಅಧ್ಯಯನ ಸಂಸ್ಥೆ ಬೆಳಕಿಗೆ ತಂದ ಕೃತಿ ಇದು (೧೯೭೨)
ಸಂಪಾದಕರು – ಎಚ್. ಕೆ. ನರಸಿಂಹೇ ಗೌಡರು

ಪ್ರಾಚ್ಯ ಪುಸ್ತಕ ಮಾಲೆಯಲ್ಲಿ ಪ್ರಕಟವಾದ ಗ್ರಂಥಗಳಲ್ಲಿ ಇದೂ ಒಂದು. (ಪ್ರಾಚ್ಯ ಸಂಶೋಧನಾಲಯ, ಮೈಸೂರು ವಿ.ವಿ.)

<u>ಈ ಗ್ರಂಥದಲ್ಲಿ ಒಟ್ಟು ೪ ಪ್ರಕರಣಗಳು</u>

೧. ಶೃಂಗಾರ ಪ್ರಪಂಚ ವಿವರಣಂ

೨. ನವರಸ ಪ್ರಪಂಚಂ

೩. ನಾಯಕ ನಾಯಿಕಾ ವಿವರಣಂ

೪. ವ್ಯಭಿಚಾರಿಭಾವ ವಿವರಣಂ

ಈತನ ಕಾಲ ಸುಮಾರು ಕ್ರಿ.ಶ. ೧೫೫೦ ಎಂದು ಅಂದಾಜಿಸಲಾಗಿದೆ. ಸಾಳ್ವಭಾರತ, ರಸರತ್ನಾಕರ, ವೈದ್ಯಸಾಂಗತ್ಯ, ಶಾರದಾವಿಲಾಸ ಈತನ ಕೃತಿಗಳು. ಈತನು ಜೈನಕವಿ. ತಂದೆ ಧರ್ಮಚಂದ್ರ, ಗುರು ಶ್ರುತಕೀರ್ತಿ (ಸಾಳ್ವಭಾರತ). ತೌಳವ, ಹೈವ, ಕೊಂಕಣ ದೇಶಾಧಿನಾಥ ಮಹಾಮಂಡಲೇಶ್ವರ ವಸುದಾನಮೇರು ಅಥವಾ ಸಾಳ್ವಮಲ್ಲನು ಆಶ್ರಯದಾತ.

'ರಸರತ್ನಾಕರ'ದ ಆರಂಭದಲ್ಲಿ

ರಸಮಿಲ್ಲದ ಕಾವ್ಯಂ ನೀ
ರಸಮದರಿಂ ಕೃತಿಗೆ ರಸಮೆ ಸಾರಂ ನೆಗಳ್ದೀ
ರಸರತ್ನಾಕರದೊಳ್ ನೆರೆ
ರಸಭಾವಮನರಿದ ಕವಿಯ ಕಬ್ಬಮೆ ಸಾರಂ

ಕಾವ್ಯದಲ್ಲಿ ರಸವೇ ಪ್ರದಾನವೆಂದು ಸಾಳ್ವನ ಅಭಿಮತ. ರಸಮಿಲ್ಲದ ಕಾವ್ಯ ನೀರಸ.

ಆನಾರ್ಯರೆಂದೆ ತಿಳಿದಮ್ಮ
ತಾನಂದಿಯ ರುದ್ರಭಟ್ಟನಾ ತೇರದಿಂ ವಿ
ದ್ಯಾನಾಥ ಹೇಮಚಂದ್ರರ
ಭೂನುತ ಮಾರ್ಗಾದಿಯಂದಮಂ ವಿರಚಿಸಿದೆಂ – ಅಲ್ಲದೆ

ನಾಗವರ್ಮ ಕವಿಕಾಮಾದಿಗಳ ಮಾರ್ಗದಿಂ ರಸಭಾವಾಭಾಸಗಳನ್ನೆಲ್ಲಾ ವಿದ್ವತ್ ಸಭೆಗವಿಷ್ಟಮಪ್ಪಂತು ಕನ್ನಡಿಸಿದೆಂ – ಅದೆಂತು ಎಂದೊಡೆ.

ಮುನ್ನೊರೆದ ಕೃತಿಗಳಿರೆ ಬಳಿ
ಕಿನ್ನೇವುದೊ ಕಬ್ಬಮೆನ್ನದಿರ್ ಕನ್ನೆಗೆ ಮು
ನ್ನಂ ನಗೆಗಣ್ ನೆಗಳ್ದಿರೆ ಬಳಿ
ಯಂನೆಲೆಮೊಲೆ ಮೂಡಿ ಮಾಡವೇ ಮೋಹನಮಂ

ಎಂದು ಸಮರ್ಥಿಸಿಕೊಳ್ಳುತ್ತಾನೆ. ಅದರಿಂದೆ ಚತುರರ್ಕಳ್ ಲೇಸಂ ಕೈ ಕೊಳ್ಗೆ. ಪ್ರಯೋಜನಮ್ ಏನೆಂದೊಡೆ

Copyright Protected

ರಸಭಾವಾಲಂಕಾರ
ಪ್ರಸರಮೆ ಪರಮೇಶ್ವರನುರು ಚರಿತ್ರಮದರಿನೊ
ಳ್ಪೆಸೆವಾ ಸಮ್ಯಕ್ತ್ವಮದರ
ಬಸಮಾಗದೆ ಪರಮ ಶಾಂತಮಮೃತಶ್ರೀಯುಂ

ವ್ಯರ್ಥಮಲ್ಲಿದು ಜಿನನ ಪ
ದಾರ್ಥ ಮನೋಧರ್ಮ ಬೋಧ ಶಾಸ್ತ್ರ ಚಿದ್ವಿ
ದ್ಯಾರ್ಥಿಗೆ ಹೇಯೋಪಾದೇ
ಯಾರ್ಥ ಜ್ಞಾನಾರ್ಥಮಪ್ಪುದೀ ರಸಶಾಸ್ತ್ರಂ

ಈ ಬಗೆಯಾಗಿ ಕನ್ನಡಕ್ಕೆ ಇಂತಹ ಒಂದು ಕೃತಿ ಅವಶ್ಯವೆಂಬುದನ್ನು ಸಾಳ್ವನು ಸಮರ್ಥಿಸುತ್ತಾನೆ.

೧೪೪೮ ಸೂತ್ರಗಳಲ್ಲಿ ವೃತ್ತಿಸಹಿತವಾಗಿ ಈ ಗ್ರಂಥ ರಚನೆಯಾಗಿದೆ. ತಾನು ಕೊಡುವ ಲಕ್ಷಣಗಳಿಗೆ ಲಕ್ಷ್ಯರೂಪವಾಗಿ ಪ್ರಾಚೀನ ಕವಿಗಳ ಪದ್ಯಗಳನ್ನು ತಕ್ಕ ವಿವರಣೆಯನ್ನು ಸಾಳ್ವನು ನೀಡುತ್ತಾನೆ. ಗ್ರಂಥದಲ್ಲಿ ನಾಲ್ಕು ವಿಭಾಗಗಳು, ಶೃಂಗಾರ ಪ್ರಪಂಚ ವಿವರಣಂ, ನವರಸ ಪ್ರಪಂಚಂ, ನಾಯಕ ನಾಯಿಕಾ ವಿವರಣಂ ಮತ್ತು ವ್ಯಭಿಚಾರಿ ವಿವರಣಂ ಎಂಬ ವಿಭಾಗಗಳಿವೆ.

ಕೇವಲ ಶೃಂಗಾರರಸ ವಿವರಣೆಗೆ ಒಂದು ಪ್ರಕರಣವನ್ನು ಮೀಸಲಿರಿಸಿ, ಎರಡನೆಯ ವಿಭಾಗದಲ್ಲಿ ಉಳಿದ ಎಂಟು ರಸಗಳನ್ನು ವಿವರಿಸಿದ್ದಾನೆ.

ಈತನು ಮುಖ್ಯವಾಗಿ ಸಂಸ್ಕೃತ ಆಲಂಕಾರಿಕರಾದ ವಿದ್ಯಾನಾಥ, ಅಮೃತಾನಂದಿ, ರುದ್ರ ಭಟ್ಟ ಇವರ ಮತವನ್ನು ಅಲ್ಲಲ್ಲಿ ಅನುವಾದ ಮಾಡಿದ್ದರೂ ವಿಶೇಷವಾಗಿ ಹೇಮಂಚಂದ್ರ ಮತವನ್ನೇ ಅನುಸರಿಸಿ ಹೋಗಿರುವನು.

ಲಕ್ಷ್ಯ ಪದ್ಯಗಳನ್ನು ಕವಿಕಾಮನ ಶೃಂಗಾರ ರತ್ನಾಕರ, ನಾಗವರ್ಮನ ಕಾವ್ಯಾವಲೋಕನಗಳಿಂದ ಆಯ್ಕೆ ಮಾಡಿದ್ದಾನೆ. ಪಂಪ, ಪೊನ್ನ, ರನ್ನ, ನೇಮಿಚಂದ್ರ, ರುದ್ರಭಟ್ಟ, ಅಗ್ಗಳ, ಜನ್ನ ಮುಂತಾದ ಕವಿಗಳ ಕಾವ್ಯಗಳಿಂದಲೂ ಲಕ್ಷ್ಯ ಪದ್ಯಗಳನ್ನು ಆರಿಸಿಕೊಂಡಿದ್ದಾನೆ.

ಸೂತ್ರ ೧ರಲ್ಲಿ –

"ಭಾವ ವಿಭಾವಮೆಸೆವ ಅನು
ಭಾವಂ ಸಂಚಾರಿಭಾವಮೆಂಬಿಂತಿವರಿಂ
ದಾವಿಷ್ಕೃತಮಕ್ಕುಂ ರಸ
ಮಾವುದುಮೆಂದರಿಗೆ ಭರತಶಾಸ್ತ್ರ ಕ್ರಮದಿಂ"

ವೃತ್ತಿಯಲ್ಲಿ – ರಾಗಾದ್ಯಭಿನಯದ ಒಡಗೂಡಿದ ಸ್ಥಾಯಿ, ವ್ಯಭಿಚಾರಿ ಲಕ್ಷಣಮಪ್ಪ –

೧. ಚಿತ್ತವೃತ್ತಿಯೆ ಭಾವಂ : ಆ ಚಿತ್ತವೃತ್ತಿಗಳ್ ಕಾವ್ಯ, ನಾಟ್ಯಶಾಸ್ತ್ರ ಪ್ರಸಿದ್ಧಂಗಳಪ್ಪ ಆಲಂಬನ, ಉದ್ದೀಪನ, ಸ್ವಭಾವಂಗಳಾದ ಲಲನೋದ್ಯಾನಾದಿಕಂಗಳಿಂ ವಿಶಿಷ್ಟತ್ತ್ವದಿಂ

೨. ಸ್ಥಾಯಿ ಭಾವಂಗಳನು ಉದ್ಬೋಧಿಪುದರಿಂ ವಿಭಾವಮೆನಿಕ್ಕುಂ

Copyright Protected

೩. ಕಟಾಕ್ಷ, ಭುಜವಿಕ್ಷೇಪಾದ್ಯನುಭವಂಗಳಿಂದ ಅನುಭವಿಸುವುದರಿಂದ ಅನುಭಾವಂಗಳ್ ಎನಿಕ್ಕುಂ ಮರ್ತ್ಯದಿಗಳ್"
ಆ ಸ್ಥಾಯಿಗಳಂ ನಾನಾ ಪ್ರಕಾರದಿಂದ ಅಭಿಮುಖಮಾಗಿ ಮಾಡುತ್ತೆ.

೪. ಸಂಚರಿಪುದರಿಂ ವ್ಯಭಿಚಾರಿಗಳೆನಿಕ್ಕುಂ

ಮೂರು ತೆರ – ಕಾರ್ಯ ಕಾರಣ, ಸಹಕಾರ [ವಿಭಾವ, ಅನುಭಾವ, ವ್ಯಭಿಚಾರಿ]

ಸೂತ್ರ ೬ರಲ್ಲಿ –

ಒದವಿದ ನಾಟಕದೊಳ್, ಕಾವ್ಯದೊಳ್ ಈಕ್ಷಿಸೆ ಪೇಳಲಾದ ಭಾವಾದಿಯನ್ ಒಳ್ಪು ಒದವೆ ಕೇಳ್ವ ಈಕ್ಷಿಪ **<u>ಸಭಾಸದರ್ಗೆ ರಸೋತ್ಪತ್ತಿ</u>**ಯೆಂದು ಪೇಳ್ವರ್ ಪಿರಿಯರ್ ಎನ್ನುತ್ತಾನೆ.

ಸೂತ್ರ ೭ ರಿಂದ ೧೦ರ ವರೆಗೆ ಸ್ಥಾಯಿ, ವಿಭಾವ, ಅನುಭಾವ, ವ್ಯಭಿಚಾರಿ ಭಾವಗಳ ವಿಧಗಳನ್ನು ತಿಳಿಸುತ್ತಾನೆ.

ಸೂತ್ರ ೧೧ ರಲ್ಲಿ ಒಂಬತ್ತು ರಸಗಳನ್ನು ೧೨ ರಲ್ಲಿ ರಸಗಳ ಸಂಬಂಧಿತ ವರ್ಣ (ಬಣ್ಣ)ಗಳನ್ನು ೧೩ರಲ್ಲಿ ರಸದ ಅಧಿದೇವತೆಗಳನ್ನು ಹೇಳುತ್ತಾನೆ.

ಸ್ನೇಹ, ಭಕ್ತಿ, ವಾತ್ಸಲ್ಯ, ಮುಂತಾದುವು ಪ್ರಧಾನ ರಸಗಳಲ್ಲಿ ಅಂತರ್ಗತ ಎನ್ನುತ್ತಾನೆ. "ಶೃಂಗಾರವು ಲೋಕಕ್ಕೆ ಸೊಗಯಿಪ್ಪದು ಆದ ಕಾರಣ ಮೊದಲೊಳ್ ಶೃಂಗಾರ ರಸಂ".

ಶೃಂಗಾರದ ಭೇದಗಳು ೨. ಸಂಭೋಗ ಹಾಗೂ ವಿಪ್ರಲಂಭ

ಇದರ ಆಲಂಬನ, ಉದ್ದೀಪನಗಳೆಂಬ ವಿಭಾವದ ಪ್ರಭೇದ ಲಕ್ಷಣಗಳನ್ನು ವಿವರಿಸುತ್ತಾನೆ. ಅನಂತರ ಅನುಭಾವ, ಸಂಚಾರಿ ಭಾವಗಳ ಲಕ್ಷಣಗಳು ಬಂದಿವೆ.

ಸೂತ್ರ ೧೪ ರಿಂದ ೨೪ –

ಆಲಂಬನ ಅನುಭಾವಗಳಲ್ಲಿ ತದನುಭವ ಹಾಗೂ ಪರ ಎಂದು ಎರಡು ಬಗೆ. ತದನುಭವ ಏಕರೂಪ. ಪರ ಇಪ್ಪತ್ತು ಬಗೆ. ಅವುಗಳೆಂದರೆ –

ಭಾವ, ಹಾವ, ಹೇಳೆ – ಇವು **<u>ಅಂಗಜ</u>** **<u>(ಭಾವಾದಿತ್ರಯ)</u>**

ಶೋಭೆ, ಕಾಂತಿ, ದೀಪ್ತಿ, ಮಾಧುರ್ಯ, ಪ್ರಾಗಲ್ಭ್ಯ, ಔದಾರ್ಯ, ಧೈರ್ಯ **<u>(ಶೋಭಾದಿ ಸಪ್ತಕ)</u>** – ಇವು **<u>ಭಾವಜ.</u>**

ಸೂತ್ರ ೨೫ ರಲ್ಲಿ **<u>ಸ್ವಾಭಾವಿಕ</u>** ಗಳು ೧೦ ಎಂದು ವಿವರಿಸುತ್ತಾನೆ. ಒಟ್ಟು ೨೦ ಆಲಂಬನ ವಿಧಗಳು.

ಸೂತ್ರ ೨೬ ರಿಂದ ಮೊಟ್ಟಾಯಿತಿ, ಬಿಬ್ಬೋಕ, ಲಲಿತ, ಲೀಲೆ, ಕಿಳಿಕಿಂಚಿತ, ವಿಚ್ಛಿತ್ತಿ, ವಿಳಾಸ, ವಿಹೃತ, ವಿಭ್ರಮ, ಕುಟ್ಟಮಿತ ಗಳನ್ನು ಲಕ್ಷ್ಯ ಸಹಿತ ವಿವರಿಸುತ್ತಾನೆ.

ಮುಂದೆ ೪೩ ನೆಯ ಸೂತ್ರಗಳ ವರೆಗೆ ವಿಪ್ರಲಂಭ ಶೃಂಗಾರವನ್ನು ಲಕ್ಷ್ಯ ಸಹಿತ ಬಣ್ಣಿಸುತ್ತಾನೆ.

ಕೊನೆಯಲ್ಲೊಂದು ಮಾತು ಮನೋಜ್ಞವಾಗಿದೆ–

Copyright Protected

ಪರಿಣಾಮವನಂತಂ, ವ್ಯವಹರಿಸುವುದು, ಅವರವರ ಅವಸ್ಥೆ ನೆಗಳ್ದುವು ಅನಂತಂ, ಪರಿಭಾವಿಸುವೊಡೆ ರಸವಿಸ್ತರಮಂ ವಿವರಿಸುವೆನೆಂಬನ್ ಆವನುಂ ಒಳನೇ ? ವಾಗ್ವೃತ್ತಿ ಶೃಂಗಾರ ರೂಪನೇಪಥ್ಯ ಶೃಂಗಾರ, ಕ್ರಿಯಾತ್ಮಕ ಶೃಂಗಾರ, ಸಂಕೀರ್ಣ ಶೃಂಗಾರ, (ರಸಸಂಕರಂ) ಶೃಂಗಾರಮಂದೊಡೆ ವಿಭಾವ ಅನುಭಾವಗಳ ನೆರವಿ, ವಿಭಾವ ಅನುಭಾವಗಳ ಪೆಸರ್ ಅನಂತಕಂ. ವಿಭಾವಾದಿಗಳ್ ರಸಪೋಷಕಗಳಲ್ಲದೆ ತಾವೆ ರಸಗಳಲ್ತು.

## ದ್ವಿ ಪ್ರಕರಣ – ನವರಸ ಪ್ರಪಂಚಂ

ಸೂತ್ರ ೪೪ರಿಂದ **ಹಾಸ್ಯರಸ**ದ ವಿವರಣೆ ಇದೆ. ಇದರ ಸ್ಥಾಯಿ ಹಾಸ, ಆಲಂಬನ ಉದ್ದೀಪನಗಳು, ಸಂಚಾರಿ ಭಾವಗಳು ಹಲವು ತೆರ.

ಅನುಭಾವವಾಗಿರುವ ನಗೆಯಲ್ಲಿ ಉತ್ತಮ, ಮಧ್ಯಮ, ಜಘನ್ಯ ಎಂದು ೩ ಬಗೆ.

ಉತ್ತಮ – ಕೃತ ಗಂಡ ವಿಕಾಸ – ಸ್ಮಿತ, ಮುಗುಳ್ನಗೆ – ಹಸಿತ

ಮಧ್ಯಮ – ಮೃದುರವಮೆ – ವಿಹಸಿತ, ಕೊರಳು ಅದುರಿದರೆ – ಉಪಹಸಿತ

ಜಘನ್ಯ – ತಲೆಯಾಡಿಸಿ ನಕ್ಕರೆ – ಅಪಹಸಿತ, ಮೈಯಲುಗಿಸಿ ನಕ್ಕರೆ – ಅತಿಹಸಿತ

ಎಲ್ಲಾ ಬಗೆಗಳಿಗೂ ಕಾವ್ಯಗಳಿಂದ ಲಕ್ಷ್ಯಗಳನ್ನು ನೀಡುತ್ತಾನೆ. ಅನುಭಾವಗಳು ಆತ್ಮಸ್ಥ, ಪರಸ್ಥ ಎಂದು ಎರಡು ಬಗೆ ಎನ್ನುತ್ತಾನೆ.

ಸೂತ್ರ ೫೦ ರಿಂದ ೫೧ **ಕರುಣ ರಸ** – ಕರುಣಂ ಶೋಕದಿಂದಕ್ಕುಂ.... ಎನ್ನುತ್ತಾ ವಿಭಾವಾದಿಗಳನ್ನು ವಿವರಿಸುತ್ತಾನೆ.

೫೨ – ೫೪ **ವೀರ ರಸ** – ಉತ್ಸಾಹ ಸ್ಥಾಯೀಭಾವ – ೩ ತೆರ ದಾನವೀರ (ಕರ್ಣ), ದಯಾವೀರ (ರಾಮ), ಉಭಯವೀರ (ಭಾರ್ಗವ).

೫೫ – ೫೬ – **ರೌದ್ರ** – ಕ್ರೋಧವೆ ಸ್ಥಾಯೀಭಾವ

೫೭ – ೫೮ – **ಅದ್ಭುತಂ ರಸ** ವಿಸ್ಮಯಜಾತಂ ಅದ್ಭುತಂ. ಅತಿಚಿತ್ರ ಚಮತ್ಕೃತಿ... ಆಲಂಬನ ವಿಭಾವ, ತದ್ವತ್ ಅಭಿನಯ ಉದ್ದೀಪನ, (ಹನೂಮಂತನ ಸಾಗರೋಲ್ಲಂಘನ)

**ಲಕ್ಷ್ಯ** –

ಮನಮುಂ ದಿಟ್ಟಿಯುಮೆಯ್ದದಂಬುನಿಧಿಯಂ ಮುಂ ದಾಂಟಿದಂ ದಾಂಟಿ ತ
ದ್ವನಪಾಲರ್ಕಳನಿಕ್ಕಿ ಕೂಡೆ ಬನಮಂ ಕಿಳ್ತೆತ್ತಿದಂ ಕಿಳ್ತುಮೊ
ರ್ವನೆ ಪಾಳೇಳ್ವಿನುಮೊಂದೆ ಕೊಳ್ಳಿಯೊಳೆ ಸುಟ್ಟಂ ಲಂಕೆಯಂ ಚೋದ್ಯಮೆಂ
ದೆನಸು ವಿಸ್ಮಯಮುತ್ತು ಮಾರುತಿಯನಾ ಲಂಕೇಶ್ವರಂ ಮೆಚ್ಚಿದಂ

ಸೂತ್ರ ೫೯ – ೬೦ ಭಯದೆ **ಭಯಾನಕ ರಸಂ**

**ಲಕ್ಷ್ಯ** – ಬೆರಲಂ ಕರ್ಚುವ ಪುತ್ತಂ
ಪರಿದೇರುವ ಕಯ್ದುವಿಕ್ಕಿ ಪೊಡಮಡುವ ಭಯ
ಜ್ವರದಿಂ ನಡುಗುವ ಭೀರುಗ
ಳರೆಬರ್ ಕನ್ನಡಿಸಿದರ್ ಭಯಾನಕರಸಮಂ

Copyright Protected

ಸೂತ್ರ ೬೧ – ಜುಗುಪ್ಸೆಯಿಂದೆ ಸಲೆ **ಬೀಭತ್ಸಂ**

ನರಕದ ನೆರೆಮನೆಯೊಡಲೆಂ
ಬರ ಮಾತಂತಿರ್ಕೆ ನರಕಮೇಳುಮನೊಂದಾ
ಗಿರಿಪ ಬಗೆಯಿಂ ವಿಧಾತ್ರಂ
ವಿರಚಿಸಿದಂ ಸಪ್ತಧಾತುಮಯಮೆನಿಪೊಡಲಂ

ಸೂತ್ರ ೬೩ – ೬೫

ಶಮಭಾವಪ್ರಭವಂ ಶಾಂತಂ
ತಮಕ್ಕುಮಂತಾ ಶಮತ್ವಮುಂ ವರ್ತಿಸುಗುಂ
ಸಮನಿಸಿ ಸಮ್ಯಗ್ಜ್ಞಾನಂ
ತಮಮಂ ರಾಗಮುಮನಲೆದು ತೊಲಗಿಸೆ ಮನದೊಳ್

ವೃತ್ತಿಯಲ್ಲಿ – ಮೋಕ್ಷಪದಮೆ ಆಲಂಬನವಿಭಾವಂ; ಸದ್ಗುರು ನಿರೂಪ, ಶ್ರವಣ, ವೈರಾಗ್ಯ, ಸಂಸಾರಭೀರುತ್ವ, ತತ್ವಜ್ಞಾನ, ವೀತರಾಗ, ಪರಿಶೀಲನ, ಪರಮೇಶ್ವರಾನುಗ್ರಹಾದಿಯುದ್ದೀಪನ ವಿಭಾವಂ ; ಸಮರಸೀಭಾವ, ಯಮ ನಿಯಮಾಧ್ಯಾತ್ಮ ಶಾಸ್ತ್ರ ಚಿಂತನಾದಿ ಅನುಭಾವಂ ; ಸ್ತಂಭ, ಆನಂದಾಶ್ರು, ಪುಳಕಾದಿ ಸಾತ್ವಿಕ ಭಾವಂ ; ಧೃತಿ, ಸ್ಮೃತಿ, ಮತಿ, ನಿರ್ವೇದಾದಿ ವ್ಯಭಿಚಾರಿ ಭಾವಂ ; ಇವರಿಂ ಸ್ವಾದ್ಯಮಾನಮಾದ ಶಮ ಸ್ಥಾಯಿಯೆ ಶಾಂತರಸಂ.

ಹೀಗೆ ಒಂಭತ್ತು ರಸಗಳ ಲಕ್ಷಣಗಳನ್ನು ಲಕ್ಷ್ಯ ಸಹಿತ ವಿವರಿಸಿ, ಸಾಳ್ವನು ಉಳಿದೆರಡು ಪ್ರಕರಣಗಳಲ್ಲಿ (ನಾಯಕನಾಯಿಕಾವಿವರಣಂ ಹಾಗೂ ವ್ಯಭಿಚಾರಿಭಾವ ವಿವರಣಂ) ಪೂರಕವಾದ ಸಂಗತಿಗಳನ್ನು ನೀಡುತ್ತಾನೆ. ಒಟ್ಟು ೧೪೮ ಲಕ್ಷಣ ಸೂತ್ರಗಳು ೨೬೬ ಲಕ್ಷ್ಯ ಪದ್ಯಗಳು ಇವನ ರಸರತ್ನಾಕರದಲ್ಲಿ ಸಂಕಲನಗೊಂಡಿವೆ.

ಇಂದುವರಮಾರುಮಿೂ ತೆರ
ದಿಂದ ಕನ್ನಡದೊಳಾರ್ಯ ರಾಯೆಂಬಿನಮೊ
ಳ್ಪಿಂದೆ ವಿವರಿಸಿದುದಿಲ್ಲೆನೆ
ಚಂದದೆ ಬಿಚ್ಚಳಿಸಿ ರಚಿಸಿದಂ ಕವಿಸಾಳ್ವಂ

ಈ ಕೃತಿ ಕವಿಕೃತನುತ ಕವಿ
ತಾಕಾಂತೆಗೆ ತಾನೆ ನವರಸಂ ಸಲೆರಸರ
ತ್ನಾಕರಮಿಳೆ ಶಶಿ ಶವಿ ರ
ತ್ನಾಕರಮಿರ್ಪನ್ನೆಗಂ ಜಯಿಕ್ಕುರ್ವರೆಯೊಳ್

ಇದು ಶತೇಂದ್ರ ಮುನೀಂದ್ರ ವಂದಿತಾರ್ಹತ್‌ಪರಮೇಶ್ವರ ಪಾದಾರವಿಂದ ಮಂದ ಮಕರಂದ ಆನಂದಿತ ಭೃಂಗಾಯಮಾನ ಕವಿ ಸಾಳ್ವ ವಿರಚಿತಂ.... ಎಂದು ಕೃತಿಯನ್ನು ಮುಕ್ತಾಯಗೊಳಿಸುತ್ತಾನೆ.

**ಉಪಸಂಹಾರ:**

ಶಾಸ್ತ್ರಗ್ರಂಥಗಳ ಅಧ್ಯಯನದಿಂದ ನಾಟ್ಯ, ಕಾವ್ಯ ವಿಮರ್ಶೆಯ ಅಳತೆಗೋಲುಗಳು ನಿರ್ದಿಷ್ಟಗೊಳ್ಳುತ್ತವೆ. ಈ ಲೇಖನವು ಅಧ್ಯಯನದ ಮೊದಲ ನುಡಿಗಳು ಮಾತ್ರ. ಈ ಗ್ರಂಥವು 'ರತ್ನಾಕರ'ವೆನಿಸಿದೆ. ಆಳಕ್ಕಿಳಿದು ಶೋಧಿಸಬೇಕು ಎಂದುದಷ್ಟೆ ನನ್ನ ಕಳಕಳಿ.

Copyright Protected